

## ಗಾಂಧಿನಗರಕ್ಕೊಬ್ಬನೇ ರವಿಶಂಕರ!

‘ಕೆಂಪೇಗೌಡ’ ಚಿತ್ರದ ಮೂಲಕ ಕನ್ನಡ ಚಿತ್ರರಂಗದಲ್ಲಿ ಖಳನಾಯಕನಾಗಿ ಜನಪ್ರಿಯರಾದ ರವಿಶಂಕರ್, ಸದ್ಯಕ್ಕೆ ಕನ್ನಡ ಚಿತ್ರರಂಗದ ಅತಿ ಬೇಡಿಕೆಯ ಕಲಾವಿದರಲ್ಲೊಬ್ಬರು. ಆದರೆ, ಈ ಜನಪ್ರಿಯತೆಯ ಹಿಂದೆ ಅವರು ಸವೆಸಿರುವ ದಾರಿ ಗುಲಾಬಿ ಪಕಳೆಗಳಿಗಿಂತಲೂ ಮುಳ್ಳುಗಳಿದ್ದುದೇ ಹೆಚ್ಚು.

ರವಿಶಂಕರ್ ಅವರದು ಡಬ್ಬಿಂಗ್ ಕಲಾವಿದರ ಕುಟುಂಬ. ಕುಟುಂಬದ ಇತರ ಸದಸ್ಯರಂತೆಯೇ ಕಂಠದಾನ ಕಲಾವಿದನಾಗಿ ಜನಪ್ರಿಯರಾದ ರವಿ, ನಟನಾಗಬೇಕೆಂದು ಆಸೆಪಟ್ಟವರು. ನಿರ್ಮಾಪಕ–ನಿರ್ದೇಶಕರಿಂದ ಕರೆಬಂದಾಗ ನಟನೆಯ ಅವಕಾಶವೆಂದೇ ಖುಷಿಗೊಳ್ಳುವುದು ಹಾಗೂ ಅದು ಡಬ್ಬಿಂಗ್ ಅವಕಾಶವೆಂದು ತಿಳಿದು ನಿರಾಶರಾದ ಘಟನೆಗಳಿಗೆ ಲೆಕ್ಕವಿಲ್ಲ. ಬೇರೆ ಭಾಷೆಯ ಕಲಾವಿದರಿಗೆ ಕಂಠದಾನ ಮಾಡುವಾಗ– ‘ಭಾಷೆ ಬಾರದವರನ್ನೆಲ್ಲ ಕರೆದುಕೊಂಡು ಬಂದು ನಟನೆ ಮಾಡಿಸುತ್ತಾರೆ. ಭಾಷೆ ಹಾಗೂ ಅಭಿನಯ ಎರಡೂ ಬರುವ ನನಗೆ ಅವಕಾಶ ಇಲ್ಲವಲ್ಲ’ ಎಂದು ಅವರು ಕೊರಗಿದ್ದೂ ಇದೆ. ಹೀಗೆ, ಇಪ್ಪತ್ತೈದು ವರ್ಷಗಳ ಕಾಲ ಕಾದ ನಂತರ ದೊರೆತ ತಿರುವು ‘ಕೆಂಪೇಗೌಡ’ ಚಿತ್ರದ್ದು.

‘ಕೆಂಪೇಗೌಡ’ ಚಿತ್ರದಲ್ಲಿನ ರವಿಶಂಕರ್ ಅವರ ಆರ್ಮುಗಂ ಪಾತ್ರ ಎಷ್ಟು ಜನಪ್ರಿಯಗೊಂಡಿತೆಂದರೆ, ಅವರು ಅಭಿಮಾನಿಗಳ ನಡುವೆ ಆರ್ಮುಗಂ ಆಗಿಯೇ ಜನಪ್ರಿಯ. ‘ಜಿಗರ್‌ಥಂಡ’ ಚಿತ್ರದಲ್ಲಿ ನಾಯಕನಿಗಿಂತಲೂ ಹೆಚ್ಚು ಪ್ರಚಾರ ದೊರೆತದ್ದು ರವಿಶಂಕರ್ ಅಭಿನಯದ ಆರ್ಮುಗಂ ಪಾತ್ರಕ್ಕೆ.

ಅಂದಹಾಗೆ, ರವಿಶಂಕರ್ ಶಾಸ್ತ್ರೀಯವಾಗಿ ಸಂಗೀತ ಹಾಗೂ ನೃತ್ಯ ಕಲಿತಿರುವುದು ಕೂಡ ಅವರ ನಟನೆಗೆ ಸಹಕಾರಿಯಾಗಿದೆ. ಇದೀಗ ಕನ್ನಡದವರೇ ಆಗಿರುವ ಅವರು, ‘ಅವಕಾಶ ಹಾಗೂ ಅನ್ನ ಕೊಟ್ಟ ಕರ್ನಾಟಕಕ್ಕೆ ಋಣಿ’ ಎನ್ನುತ್ತಾರೆ.

ಖ್ಯಾತನಾಮರ ಸಿನಿಮಾಗಳಲ್ಲಿ ಅವಕಾಶಗಳೇನೂ ಹುಡುಕಿಕೊಂಡು ಬಂದಿಲ್ಲ. ಅವರು ಈಗಲೂ ಚಾಲ್ತಿಯಲ್ಲಿರುವುದು ಹೊಸತಂಡಗಳ ಪ್ರಯೋಗಶೀಲ ಚಿತ್ರಗಳಲ್ಲೇ.

### ಹೊಸಬೆಳಕು

ಖಳಪಾತ್ರಗಳನ್ನು ವಿಶೇಷವಾಗಿ ಚಿತ್ರಿಸುವ ಬಗ್ಗೆ ಅಪರೂಪಕ್ಕಾದರೂ ಕೆಲವು ವಿಶೇಷ ಪ್ರಯತ್ನಗಳು ನಡೆಯುತ್ತಿರುವುದು ಕುತೂಹಲಕರವಾಗಿದೆ. ಪ್ರಸ್ತುತ ಚಿತ್ರೀಕರಣದ ಹಂತದಲ್ಲಿರುವ ಶಿವರಾಜ್‌ಕುಮಾರ್ ನಟನೆಯ ‘ಟಗರು’ ಚಿತ್ರದಲ್ಲಿ ಧನಂಜಯ್ ಖಳನಾಯಕ! ನಾಯಕನಟನಾಗಿ ಗುರ್ತಿಸಿಕೊಂಡಿರುವ ಧನಂಜಯ್ ಅವರನ್ನು ನಿರ್ದೇಶಕ ಸೂರಿ ಖಳನಾಯಕನ ಪಾತ್ರಕ್ಕೆ ಆರಿಸಿಕೊಂಡಿದ್ದಾರೆ. ‘ಸೂರಿ ಅವರಂಥ ನಿರ್ದೇಶಕರ ಜೊತೆ ಕೆಲಸ ಮಾಡುವ ಅನುಭವಕ್ಕಾಗಿ ಈ ಸಿನಿಮಾ ಒಪ್ಪಿಕೊಂಡಿದ್ದೇನೆ’ ಎನ್ನುವ ಧನಂಜಯ್ ಕಲಿಕೆಯ ಹಂಬಲವೂ ಮೆಚ್ಚುವಂತಿದೆ. ಹರ್ಷ ನಿರ್ದೇಶನದ ‘ಭಜರಂಗಿ’ ಚಿತ್ರದಲ್ಲಿ ವಿಶೇಷ ಪಾತ್ರವೊಂದನ್ನು ಪೋಷಿಸಿದ್ದ ಲೋಕಿ ಕೂಡ ಪ್ರತಿಭಾವಂತ ಕಲಾವಿದ. ನಟನೆಯ ಜೊತೆಗೆ ದೇಹವನ್ನು ಹುರಿಗಟ್ಟಿಸುವ ಮೂಲಕವೂ ಲೋಕಿ ಗಮನ ಸೆಳೆದಿದ್ದಾರೆ.

ಅಲ್ಲೊಂದು ಇಲ್ಲೊಂದು ಪ್ರಯತ್ನದ ನಡುವೆಯೂ ಖಳಪಾತ್ರಗಳನ್ನೂ ಒಳಗೊಂಡಂತೆ ಸಶಕ್ತ ಪೋಷಕ ಪಾತ್ರಗಳನ್ನು ರೂಪಿಸುವ ಸವಾಲನ್ನು ಹೊಸ ತಲೆಮಾರಿನ ನಿರ್ದೇಶಕರು ಎದುರಿಸಬೇಕಾಗಿದೆ. ‘ಹಿಂದೆಲ್ಲ ಪಾತ್ರಗಳನ್ನು ಸೃಷ್ಟಿಸುತ್ತಿದ್ದರು. ಈಗ ಪಾತ್ರಗಳನ್ನು ಅಭಿನಯಿಸುತ್ತಿದ್ದೇವೆ’ ಎನ್ನುವ ನಟ ಶೋಭರಾಜ್‌ರ ಮಾತನ್ನು ತಮಾಷೆಯಾಗಿಯೂ ಗಂಭೀರವಾಗಿಯೂ ಪರಿಗಣಿಸಬಹುದು.

ಈಗಿನ ನಿರ್ದೇಶಕರಲ್ಲಿ ಜೀವನದ್ರವ್ಯ ಕಡಿಮೆ ಎನ್ನುವ ಧ್ವನಿ ಸಿನಿಮಾದಾಚೆಗೂ ಎಲ್ಲ ಕ್ಷೇತ್ರಗಳಿಗೂ ಅನ್ವಯಿಸಬಹುದಾದ ಮಾತು. ಕೊನೆಗೂ ಈ ಚರ್ಚೆ ಕೊನೆಗೊಳ್ಳುವುದು ಕಥೆಗೆ ಸಂಬಂಧಿಸಿದಂತೆಯೇ! ನಮ್ಮ ನಿರ್ಮಾಪಕ–ನಿರ್ದೇಶಕರು ಎಲ್ಲಿಯವರೆಗೆ ಅಸಲಿ ಕಥೆಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಜಾಳುಜಾಳು ಪಾತ್ರಗಳು ಸೃಷ್ಟಿಯಾಗುತ್ತಲೇ ಇರುತ್ತವೆ. ‘ಒಳ್ಳೆಯ ಕಥೆ’ ಎನ್ನುವುದು ಜೀವನದ ಸಮೃದ್ಧಿ ಮತ್ತು ಸಂಕೀರ್ಣತೆಗೆ ಸಂಬಂಧಿಸಿದ್ದು ಎನ್ನುವುದನ್ನು ಚಿತ್ರರಂಗದ ಸೃಜನಶೀಲರು ಮತ್ತೆ ಮತ್ತೆ ಮನವರಿಕೆ ಮಾಡಿಕೊಳ್ಳಬೇಕಾಗಿದೆ.

